ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೊಂದನೆಯ ಅಧಿವೇಶನ

ಬುಧವಾರ, ದಿನಾಂಕ : 30 ನೇ ಸೆಪ್ಟೆಂಬರ್, 2020

ರಾಜ್ಯದಲ್ಲಿ ಪೋಡಿಗೆ ಸಂಬಂಧಿಸಿದ ಪ್ರಕರಣಗಳ ವಿವರ

ಶ್ರೀ ನಸೀರ್ ಅಹ್ಮದ್(ವಿಧಾನಸಭೆಯಿಂದ ಚುನಾಯಿತರಾದವರು) -

1066 (1142) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ -

(ಅ) ರಾಜ್ಯದಲ್ಲಿ ಒಟ್ಟು ಪೋಡಿ ಮಾಡಲು ಬಾಕಿ ಇರುವ ಪ್ರಕರಣಗಳ ಸಂಖ್ಯೆ ಎಷ್ಟು; ಪೋಡಿ ಮಾಡಬೇಕಾದ ಸರ್ವೆ ನಂಬರ್‌ಗಳ ಸಂಖ್ಯೆ ಹಾಗೂ ಖಾತೆದಾರರ ಸಂಖ್ಯೆ ಎಷ್ಟು; ಹಾಗೂ ಯಾವುವು;

(ಆ) ಪೋಡಿ ಮಾಡಲು ಲಭ್ಯವಿರುವ ಮೂಲ ಕಡತಗಳೆಷ್ಟು;

(ಇ) ಪೋಡಿ ಮಾಡಲು ಅಲಭ್ಯವಿರುವ ಕಡತಗಳೆಷ್ಟು; ಲಭ್ಯವಿಲ್ಲದೆ ಇರಲು ಕಾರಣಗಳೇನು;

(ಈ) ಪೋಡಿ ಮಾಡಲು ಇರುವ ನಮೂನೆ 1 ರಿಂದ 5 ರ ಪ್ರಕರಣಗಳ ಸಂಖ್ಯೆ ಎಷ್ಟು; ನಮೂನೆ 1 ರಿಂದ 10ರ ಪ್ರಕರಣಗಳ ಸಂಖ್ಯೆ ಎಷ್ಟು;

(ಉ) ಈ ಹಿಂದೆ ಪೋಡಿಯಾಗಿದ್ದು, ಹೊಸ ಸರ್ವೆ ನಂಬರ್ ಪಹಣಿ ನಮೂದಿಸದೆ ಇರುವ ಪ್ರಕರಣಗಳೆಷ್ಟು;

(ಊ) ಪೋಡಿ ಮಾಡಲು ಎ.ಡಿ.ಎಲ್.ಆರ್.ರವರ ಕಛೇರಿಯಿಂದ ಸರ್ವೆ ಕಾರ್ಯ ನಡೆಸಿರುವ ಪ್ರಕರಣಗಳೆಷ್ಟು?

(ಋ) ತಹಶೀಲ್ದಾರ್‌ರವರ ಕಛೇರಿಯಿಂದ ಸಹಾಯಕ ಕಮೀಷನರ್‌ರವರ ಕಛೇರಿಗೆ ಸಹಾಯಕ ಕಮೀಷನರ್‌ರವರ ಕಛೇರಿಯಿಂದ ಡಿ.ಎಲ್.ಆರ್. ಕಛೇರಿಗೆ ಸಲ್ಲಿಸಲಾಗಿರುವ ಪ್ರಕರಣಗಳೆಷ್ಟು;

(ಎ) ಪೋಡಿ ಮಾಡಿ ಹೊಸ ಸರ್ವೆ ನಂಬರ್ ನೀಡಲಾಗಿರುವ ಪ್ರಕರಣಗಳೆಷ್ಟು?